# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 691 |
| ಸದಸ್ಯರ ಹೆಸರು | : | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13.12.2024 |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಗ್ರಾಮ ಪಂಚಾಯತಿಗಳಿಗೆ ವಿವಿಧ ಮೂಲಗಳಿಂದ ಹರಿದು ಬರುವ ಆದಾಯವೆಷ್ಟು; | ರಾಜ್ಯದ ಗ್ರಾಮ ಪಂಚಾಯತಿಗಳಿಗೆ ವಿವಿಧ ಮೂಲಗಳಿಂದ ಹರಿದು ಬರುವ ಆದಾಯದ ವಿವರವನ್ನು ಅನುಬಂಧದಲ್ಲಿ ನೀಡಿದೆ. |
| (ಆ) | ಈ ಪೈಕಿ ತೆರಿಗೆ ವ್ಯಾಪ್ತಿಗೆ ಒಳಪಡುವ ಕೃಷಿಯೇತರ ಆದಾಯ ಮೂಲಗಳನ್ನು ಸರ್ಕಾರ ಗುರುತಿಸಿದೆಯೇ; | ಹೌದು.<br><br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 ರಲ್ಲಿ ಗ್ರಾಮ ಪಂಚಾಯತಿಯು ಪಂಚಾಯತಿ ಪ್ರದೇಶದ ಪರಿಮಿತಿಗಳೊಳಗಿರುವ, ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಕಟ್ಟಡಗಳು ಮತ್ತು ಭೂಮಿಗಳ ಮೇಲೆ ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿಅನುಸೂಚಿ-IV ರಲ್ಲಿ ನಿರ್ದಿಷ್ಟಪಡಿಸಿರುವಂತೆ ತೆರಿಗೆಗಳನ್ನು ಅಥವಾ ಫೀಜುಗಳನ್ನು ವಿಧಿಸಬಹುದಾಗಿದೆ.<br><br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು, 2021 ಅನ್ನು ರೂಪಿಸಲಾಗಿದ್ದು, ಅದರಂತೆ ಗ್ರಾಮ ಪಂಚಾಯತಿಗಳು ತೆರಿಗೆ, ದರ ಮತ್ತು ಫೀಜುಗಳನ್ನು ವಿಧಿಸಲು ಕ್ರಮವಹಿಸಬೇಕಾಗಿರುತ್ತದೆ. |
| (ಇ) | ನಿರೀಕ್ಷಿತ ತೆರಿಗೆ ಸರ್ಕಾರಕ್ಕೆ ವಸೂಲಾಗದಿರಲು ಕಾರಣಗಳೇನು; ತೆರಿಗೆ ವಸೂಲಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಗ್ರಾಮ ಪಂಚಾಯಿತಿಗಳಿಂದ ನಿಗಧಿತವಾಗಿ ತೆರಿಗೆ ವಸೂಲಿ ಮಾಡಲು ಕ್ರಮ ವಹಿಸಲಾಗಿದೆ.<br><br>ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆ ವಸೂಲಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳು ಈ ಕೆಳಕಂಡತಿವೆ.<br><br>1. ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/64/ಇ-ಆಡಳಿತ/2022, ದಿನಾಂಕ: 08.08.2022 ರಲ್ಲಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಎಲ್ಲಾ ಭೂಮಿ ಮತ್ತು ಕಟ್ಟಡಗಳ ಮ್ಯಾನ್ಯುಯಲ್ ಸಮೀಕ್ಷೆ ನಡೆಸಿ ತೆರಿಗೆ ವ್ಯಾಪ್ತಿಗೆ ಒಳಪಡಿಸಿ ಪಂಚತಂತ್ರ 2.0 ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ ಹಾಗೂ ತೆರಿಗೆ ನಿರ್ಧರಣಾ ಪಟ್ಟಿಗಳಲ್ಲಿ ನಮೂದು ಮಾಡುವ ಬಗ್ಗೆ ತಿಳಿಸಲಾಗಿರುತ್ತದೆ.<br><br>2. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣ 199 ರ ಅನುಸೂಚಿ IV ರನ್ವಯ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಎಲ್ಲಾ ಭೂಮಿ ಮತ್ತು ಕಟ್ಟಡಗಳ ತೆರಿಗೆಯನ್ನು ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿ ತೆರಿಗೆಯನ್ನು ಲೆಕ್ಕಾಚಾರ ಮಾಡಿ ವಸೂಲು ಮಾಡುವ ಬಗ್ಗೆ ತಿಳಿಸಲಾಗಿರುತ್ತದೆ. |

| | | |
|---|---|---|
| | | 3. ಗ್ರಾಮ ಪಂಚಾಯಿತಿಗಳು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣ 64, 66, 68, 69, ರನ್ವಯ ಲೈಸೆನ್ಸ್ ಶುಲ್ಕಗಳು, ಕಟ್ಟಡ ಪರವಾನಿಗೆ ಶುಲ್ಕಗಳು, ವಾಣಿಜ್ಯ ಪರವಾನಿಗೆ ಶುಲ್ಕಗಳು, ಕಾರ್ಖಾನೆ ಅನುಮತಿ ಶುಲ್ಕಗಳನ್ನು ಸಂಗ್ರಹಿಸುವ ಬಗ್ಗೆ ತಿಳಿಸಲಾಗಿರುತ್ತದೆ.<br><br>4. ಮೇಲ್ಕಂಡಂತೆ ತೆರಿಗೆ ಮತ್ತು ಆದಾಯಗಳ ಸಂಗ್ರಹಣೆಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು, 2021 ನ್ನು ಜಾರಿಗೊಳಿಸಲಾಗಿರುತ್ತದೆ.<br><br>5. ಮೇಲ್ಕಂಡ ನಿಯಮಗಳನ್ವಯ ತೆರಿಗೆ ಲೆಕ್ಕಾಚಾರ ಹಾಗೂ ತೆರಿಗೆಗೆ ಸಂಬಂಧಿಸಿದ ವಿವರಗಳನ್ನು ಪಂಚತಂತ್ರ 2.0 ತಂತ್ರಾಂಶದ ಮೂಲಕ ನಿರ್ವಹಣೆ ಮಾಡಲಾಗುತ್ತಿರುತ್ತದೆ.<br><br>6. ತೆರಿಗೆ ಸಂಗ್ರಹಣೆಗಾಗಿ ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿಗಳಿಗೆ POS ಯಂತ್ರಗಳನ್ನು ವಿತರಣೆ ಮಾಡಿದ್ದು, ತೆರಿಗೆ ಪಾವತಿದಾರರು, ಆಸ್ತಿಗಳ ತೆರಿಗೆಯನ್ನು POS Machine, ಮೊಬೈಲ್ ವಾಲೆಟ್ (Google Pay, Phone pay, Watsapp Pay) ಗಳ ಮೂಲಕ ಹಾಗೂ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಮತ್ತು ಆನ್ ಲೈನ್ ಮೂಲಕ ತೆರಿಗೆ ಪಾವತಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>7. ಬಾಪೂಜಿ ಸೇವಾ ಕೇಂದ್ರಗಳು ಹಾಗೂ ಆನ್ ಲೈನ್ (https//: bsk.karnataka.gov.in) ಮೂಲಕ ಗ್ರಾಮ ಪಂಚಾಯಿತಿಯಿಂದ ಪಡೆಯುವ ಸೇವೆಗಳಿಗೆ ಶುಲ್ಕಗಳನ್ನು ಪಾವತಿ ಮಾಡಲು ಹಾಗೂ ಪ್ರಮಾಣ ಪತ್ರಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>8. ಸರ್ಕಾರದ ಆದೇಶ ಸಂಖ್ಯೆ: RDPR 247 GPA 2022 ಬೆಂಗಳೂರು. ದಿನಾಂಕ: 23.11.2022 ರಂತೆ ಗ್ರಾಮ ಪಂಚಾಯಿತಿಯ ಸ್ವಂತ ಆಸ್ತಿಗಳನ್ನು ಗುತ್ತಿಗೆ ನೀಡುವುದು, ಬಾಡಿಗೆ ನೀಡುವುದು, ಹರಾಜು ಮಾಡುವುದು.... ಇತ್ಯಾದಿಗಳ ಮೂಲಕ ಆದಾಯ ಸಂಗ್ರಹಣೆಗೆ ಅವಕಾಶ ಕಲ್ಪಿಸಿದೆ.<br><br>9. The Karnataka Gram Swaraj and Panchayat Raj (Grampanchayt) (Telecommunication Infrastructure Tower and Overground Cable or Underground Optical Fiber Cable Infrastructure) Bye-Laws, 2021 ಅನ್ವಯ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಮೊಬೈಲ್ ಟವರ್ ಹಾಗೂ OFC ಕೇಬಲ್ ಗಳನ್ನು ಅಳವಡಿಸಲು ಶುಲ್ಕಗಳನ್ನು ನಿಗಧಿಪಡಿಸಿದ್ದು ಅದರನ್ವಯ ಆದಾಯ ಸಂಗ್ರಹಣೆಗೆ ಅವಕಾಶ ಕಲ್ಪಿಸಿದೆ. |

ಸಂಖ್ಯೆ: ಗ್ರಾಅಪ 678 ಗ್ರಾಪಂಅ 2024

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

## ಅನುಬಂಧ

| ಕ್ರ ಸಂ | ಜಿಲ್ಲೆಗಳ ಹೆಸರು | ವಿವಿಧ ಮೂಲಗಳಿಂದ ಗ್ರಾಮ ಪಂಚಾಯಿತಿಗಳಿಗೆ ಬರುವ ಒಟ್ಟು ಆದಾಯ |
|---|---|---|
| 1 | ಬಾಗಲಕೋಟೆ | 1484944571 |
| 2 | ಬಳ್ಳಾರಿ | 788410225 |
| 3 | ವಿಜಯನಗರ | 908831920 |
| 4 | ಬೆಳಗಾವಿ | 4319991589 |
| 5 | ಬೆಂಗಳೂರು ಗ್ರಾಮಾಂತರ | 1671115288 |
| 6 | ಬೆಂಗಳೂರು ನಗರ | 3922985782 |
| 7 | ಬೀದರ್ | 1377961072 |
| 8 | ಚಾಮರಾಜನಗರ | 849883793 |
| 9 | ಚಿಕ್ಕಬಳ್ಳಾಪುರ | 1235782836 |
| 10 | ಚಿಕ್ಕಮಗಳೂರು | 1248507833 |
| 11 | ಚಿತ್ರದುರ್ಗ | 1467926785 |
| 12 | ದಕ್ಷಿಣ ಕನ್ನಡ | 1702262483 |
| 13 | ದಾವಣಗೆರೆ | 1829877815 |
| 14 | ಧಾರವಾಡ | 995702330 |
| 15 | ಗದಗ | 802407365 |
| 16 | ಹಾಸನ | 2007885386 |
| 17 | ಹಾವೇರಿ | 1272515157 |
| 18 | ಕಲಬುರಗಿ | 1921767362 |
| 19 | ಕೊಡಗು | 647812719 |
| 20 | ಕೋಲಾರ | 1539139644 |
| 21 | ಕೊಪ್ಪಳ | 1130428316 |
| 22 | ಮಂಡ್ಯ | 1717119845 |
| 23 | ಮೈಸೂರು | 2940726276 |
| 24 | ರಾಯಚೂರು | 1256587337 |
| 25 | ರಾಮನಗರ | 1611364481 |
| 26 | ಶಿವಮೊಗ್ಗ | 1466643495 |
| 27 | ತುಮಕೂರು | 2694568156 |
| 28 | ಉಡುಪಿ | 1826069248 |
| 29 | ಉತ್ತರ ಕನ್ನಡ | 1211305448 |
| 30 | ವಿಜಯಪುರ | 1614474166 |
| 31 | ಯಾದಗಿರಿ | 1274233066 |
| ಒಟ್ಟು | | 50739231789 |

Scanned with CamScanner